ದಿನಾಂಕ : 02 .12.2014
ಓ.ಎಸ್.54-2011
ಡಿ.ಡಬ್ಲ್ಯೂ-2

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಹೆಚ್ ಪಿ ಎಸ್ ರವರಿಂದಃ**

ನಂಜಾಚಾರಿ ರವರ ಮೂಲ ಸ್ಥಳ ರಾಮನಗರ ಜಿಲ್ಲೆ ಮಗಡಿ ತಾಲ್ಲೂಕು , ಚಿಕ್ಕೇನ ಹಳ್ಳಿ ಗ್ರಾಮ. ನಾನು ಸದರಿ ಗ್ರಾಮಕ್ಕೆ ಯಾವಾಗಲೂ ಸಹ ಭೇಟಿ ನೀಡಿಲ್ಲ. ನಂಜಾಚಾರಿ ಮತ್ತು ಆತನ ಸಹೋದರ ನಿಂಗಾಚಾರಿ ಗೊತ್ತು. ಅವರಿಬ್ಬರೂ ನಮ್ಮ ಊರಿನಲ್ಲಿ ವಾಸ ಇದ್ದರು. ನಂಜಾಚಾರಿಯ ಮತ್ತೊಬ್ಬ ಸಹೋದರನ ಬಗ್ಗೆ ನನಗೆ ಗೊತ್ತಿಲ್ಲ. ನಂಜಾಚಾರಿ ಮತ್ತು ಆತನ ಸಹೋದರರಿಗೆ ಚಿಕ್ಕೇನ ಹಳ್ಳಿ ಗ್ರಾಮದಲ್ಲಿ ಎಷ್ಟು ಸ್ವತ್ತುಗಳು ಮತ್ತು ಯಾವ ಯಾವ ಸ್ವತ್ತುಗಳು ಇದ್ದವು ಮತ್ತು ಅವುಗಳು ಏನಾದವು ಅಂತ ನನಗೆ ಗೊತ್ತಿಲ್ಲ. ನಂಜಾಚಾರಿ ಇವರು ಚಿಕ್ಕೇನ ಹಳ್ಳಿ ಗ್ರಾಮದಲ್ಲಿ ತಮಗೆ ಇದ್ದ ಸ್ವತ್ತುಗಳನ್ನು ಮಾರಾಟ ಮಾಡಿ ನಮ್ಮ ಊರಿಗೆ ಬಂದು ನೆಲೆಸಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಂಜಾಚಾರಿಯವರ ಹೆಂಡತಿ ಮತ್ತು ಮಕ್ಕಳು ಮತ್ತು ತಮ್ಮ ಕುಟುಂಬದ ನಿರ್ವಹಣೆಯನ್ನು ತಾವೆ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ನಂಜಾಚಾರಿಯವರು ತನ್ನ ಕುಟುಂಬದ ಯಜಮಾನಿಕೆ ಮಾಡುತ್ತಿದ್ದ ಕಾಲಕ್ಕೆ ದಾವಾ ಆಸ್ತಿಗಳನ್ನು ಸಹ ನಮ್ಮ ಊರಿನಲ್ಲಿ ಕ್ರಯಕ್ಕೆ ಕೊಂಡಿದ್ದಾರೆ ಅಂದರೆ ಸಾಕ್ಷಿಯು ನಂಜಾಚಾರಿ ಮತ್ತು ಆತನ ಮಗ ಇಬ್ಬರು ಖರೀದಿಸಿದ್ದಾರೆ ಎಂದು ಹೇಳುತ್ತಾರೆ. ಮನೆಯ ಯಜಮಾನಿಕೆಯನ್ನು ನಂಜಾಚಾರಿ ಮತ್ತು ಆತನ ಮಗ ಇಬ್ಬರೂ ಮಾಡುತ್ತಿದ್ದರು. ಯಾವ ಯಾವ ಮೂಲದಿಂದ ಬಂದ ಹಣ ಮತ್ತು ಎಷ್ಟೆಷ್ಟು ಹಣವನ್ನು ತೊಡಗಿಸಿ ನಮ್ಮ ಊರಿನಲ್ಲಿ ಆಸ್ತಿಗಳನ್ನು ಕೊಂಡಿದ್ದಾರೆ ಅಂತ ನನಗೆ ಗೊತ್ತಿಲ್ಲ. ಆದರೆ ಸದರಿ ಖರೀದಿ ಮತ್ತು ಕ್ರಯಪತ್ರ ಹಾಗೂ ವ್ಯವಹಾರಗಳಿಗೆ ನಾನು ಸೇರಿಲ್ಲ. ಸದರಿ ಪತ್ರಗಳನ್ನು ನಾನು ನೋಡಿದ್ದೇನೆ. ನಮ್ಮ ಊರಿನ ಮಂಚಣ್ಣ ಎಂಬುವರಿಂದ ಮತ್ತು ಪಂಚಾಯ್ತಿಯಿಂದ ಒಂದು ನಿವೇಶನ ಇವುಗಳು ನಂಜಾಚಾರಿಯವರ ಹೆಸರಿಗೆ ಕ್ರಯ ಆಗಿರುತ್ತವೆ. ಪ್ರಸ್ತುತ ಕೇಸಿನಲ್ಲಿ ಹೊರತುಪಡಿಸಿ 1ನೇ ಪ್ರತಿವಾದಿಯು ನನ್ನನ್ನು ಕುರಿತು ಇತರೆ ಬೇರೆ ಯಾವುದೇ ಕೇಸುಗಳಲ್ಲಿ ಸಾಕ್ಷ್ಯ ನುಡಿಯಬೇಕು ಎಂದು ಕೇಳಿಕೊಂಡಿರುವುದಿಲ್ಲ.

ನಂಜಾಚಾರಿ ಈ ಮೇಲೆ ಹೇಳಿದ ಸ್ವತ್ತುಗಳನ್ನು ಖರೀದಿಸಿದ ಕಾಲಕ್ಕೆ 1ನೇ ಪ್ರತಿವಾದಿಗೆ ಸುಮಾರು 26 ವರ್ಷ ವಯಸ್ಸು ಆಗಿತ್ತು. ನಂಜಾಚಾರಿಯವರು ಸದರಿ ಆಸ್ತಿಗಳನ್ನು ಆರ್ಜಿಸಿದ ಕಾಲಕ್ಕೆ 1ನೇ ಪ್ರತಿವಾದಿಯು ಮೈನರ್ ಮಗು ಆಗಿದ್ದರು ಎಂದರೆ ಸುಳ್ಳು. 1ನೇ ಪ್ರತಿವಾದಿಯ ಮಾತು ಕೇಳಿ ನಂಜಾಚಾರಿಯವರ ಜೊತೆ ಆತನು ಸೇರಿಕೊಂಡು ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂಬುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಆಸ್ತಿ ಖರೀದಿಸಲು 1ನೇ ಪ್ರತಿವಾದಿಯು ಎಷ್ಟು ಹಣ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆಸ್ತಿಗಳನ್ನು 1ನೇ ಪ್ರತಿವಾದಿ ಪುಟ್ಟಸ್ವಾಮಿ ಮತ್ತು 6ನೇ ವಾದಿ ಮನು ಬ್ರಹ್ಮಚಾರಿ ಇಬ್ಬರಿಗೆ ಮಾತ್ರವೇ ಹಂಚಿಕೆ ಮಾಡಿದ್ದೇವೆ. ಆ ರೀತಿ ಆಸ್ತಿಗಳನ್ನು ಅವರಿಬ್ಬರ ನಡುವೆ ಹಂಚಿಕೆ ಮಾಡಿದ ಕಾಲಕ್ಕೆ 2 ಮತ್ತು 3ನೇ ವಾದಿಯರಿಗೆ ಇನ್ನೂ ವಿವಾಹ ಆಗಿರಲಿಲ್ಲ. ಆ ರೀತಿ ಹಂಚಿಕೆ ಮಾಡುವ ಕಾಲಕ್ಕೆ 2 ಮತ್ತು 3ನೇ ವಾದಿಯರನ್ನು ಕರೆಯಿಸಿ ಅವರ ಮದುವೆ ಬಗ್ಗೆ ನಾವುಗಳು ಕುರಿತು ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಸ್ವತಃ ಹೇಳುತ್ತಾರೆ ನಂಜಾಚಾರಿಯವರು ನನ್ನ ಬಳಿ ಹಣ ಮತ್ತು ಒಡವೆಗಳು ಇರುತ್ತವೆ ನಾನೇ 2 ಮತ್ತು 3ನೇ ವಾದಿಯರ ಮದುವೆಯನ್ನು ಮಾಡುತ್ತೇನೆ ಎಂದು ಹೇಳಿದ್ದರು. ಆ ಕಾಲಕ್ಕೆ ನಂಜಾಚಾರಿಯವರು ಎಷ್ಟು ಹಣ ಮತ್ತು ಒಡವೆಯನ್ನು ಇಟ್ಟಿದ್ದರು ಎಂಬುದಾಗಿ ನಾವುಗಳು ನಮ್ಮ

ಮುಂದೆ ತರಿಸಿ ನೋಡಿರುವುದಿಲ್ಲ. 2 ಮತ್ತು 3ನೇ ವಾದಿಯರ ಮದುವೆಯಾಗುವುದಕ್ಕಿಂತ ಮುಂಚೆಯೇ ನಂಜಾಚಾರಿಯವರು ತೀರಿಕೊಂಡಿದ್ದರು. ನಂಜಾಚಾರಿಯವರು ತೀರಿಕೊಂಡ ನಂತರ 2 ಮತ್ತು 3ನೇ ವಾದಿಯರ ಮದುವೆಗೋಸ್ಕರ ಇಟ್ಟಿದ್ದ ಹಣ ಮತ್ತು ಒಡವೆಗಳು ಯಾರಿಗೆ ಸೇರಿಕೊಂಡವು ಅಂತ ನನಗೆ ಗೊತ್ತಿಲ್ಲ.

ಜೂನ್ ತಿಂಗಳ 1992 ರ ಇಸವಿಯಲ್ಲಿ ವಿಭಾಗಕ್ಕೆ ಸೇರಿದ್ದು , ದಿನಾಂಕ ಮತ್ತು ವಾರ ನನಗೆ ನೆನಪಿಲ್ಲ. ಅವರ ಕುಟುಂಬದಲ್ಲಿ ಯಾವುದೇ ಗಲಾಟೆ ಅಥವಾ ಜಗಳ ಆಗಿರಲಿಲ್ಲ. ನಂಜಾಚಾರಿಯವರಿಗೆ ಆರೋಗ್ಯ ಸರಿಯಿಲ್ಲದೇ ಇದ್ದುದರಿಂದ ತಾನು ಸಂಪಾದನೆ ಮಾಡಿದ ಆಸ್ತಿಯನ್ನು ಇಬ್ಬರು ಮಕ್ಕಳಿಗೆ ಹಂಚಿಕೆ ಮಾಡಿಕೊಡಬೇಕಾಗಿ ನಮಗೆ ನಂಜಾಚಾರಿಯವರು ಹೇಳಿದ್ದರು. ಮನೆಯಲ್ಲಿಯೇ ಕುಳಿತು ಆಸ್ತಿಗಳನ್ನು ಹಂಚಿಕೆ ಮಾಡಿದ್ದು , ಜಮೀನಿನ ಬಳಿ ಹೋಗಿ ಅಳತೆ ಮಾಡಿಕೊಟ್ಟಿರುವುದಿಲ್ಲ. ಸದರಿ ವಿಭಾಗದಲ್ಲಿ ನಂಜಾಚಾರಿ ಮತ್ತು ಆತನ ಹೆಂಡತಿಗೆ ಯಾವುದೇ ಜಮೀನುಗಳನ್ನು ಬಿಟ್ಟಿರುವುದಿಲ್ಲ. ನಂಜಾಚಾರಿ ಮತ್ತು ಆತನ ಹೆಂಡತಿಗೆ ವಾಸ ಮಾಡಲು ವಾರಪಾಕಲು ಬಿಟ್ಟಿದ್ದೆವು. ನಮ್ಮ ಊರಿನಲ್ಲಿ ಯಾವುದೇ ಪಂಚಾಯ್ತಿಯಲ್ಲಿ ತೀರ್ಮಾನ ಮಾಡಿದರೆ ಆ ಬಗ್ಗೆ ಸಾಮಾನ್ಯವಾಗಿ ಬರವಣಿಗೆ ಮಾಡುಲಾಗುತ್ತದೆ ಎಂದರೆ ನಿಜ. ಆ ದಿನ ಆಸ್ತಿಗಳನ್ನು ಹಂಚಿಕೆ ಮಾಡುವ ಕಾಲಕ್ಕೆ ಕೇವಲ ಮಾತುಕತೆ ಮಾತ್ರ ಆಗಿರುತ್ತದೆ. ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡ ನಂತರ ತಮ್ಮ ತಮ್ಮ ಹೆಸರಿಗೆ ಕಂದಾಯ ದಾಖಲೆಗಳನ್ನು ಮಾಡಿಸಿಕೊಳ್ಳಿ ಎಂದು ಅವರಿಗೆ ಹೇಳಿರಲಿಲ್ಲ, ಆದರೆ ಅನುಭವ ಮಾಡಿಕೊಂಡು ಹೋಗುತ್ತಿದ್ದಾರೆ. ನಂಜಾಚಾರಿಯವರ ಮಾತು ನಮಗೆ ವೇದವಾಕ್ಯ ಆಗಿದ್ದರಿಂದ ವಿಭಾಗ ಆದ ಬಗ್ಗೆ ಯಾವುದೇ ದಾಖಲೆಯನ್ನು ಬರವಣಿಗೆ ಮಾಡಲಿಲ್ಲ. ನಂಜಾಚಾರಿಯವರ ಕುಟುಂಬದಲ್ಲಿ ಯಾವತ್ತೂ ಕೂಡ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಂಜಾಚಾರಿಯವರ ಕುಟುಂಬದಲ್ಲಿ ವಿಭಾಗದ ವ್ಯವಹಾರಕ್ಕೆ ಬಿಟ್ಟರೆ ಅವರ ಕುಟುಂಬದ ಬೇರೆ ಯಾವುದೇ ವ್ಯವಹಾರಗಳಿಗೆ ನಾನು ಸೇರಿಲ್ಲ. 2 ಮತ್ತು 3 ವಾದಿಯರ ಮದುವೆಗೆ ಹಣ ಮತ್ತು ಒಡವೆಗಳು ಇದ್ದು ಎಲ್ಲರೂ ಸೇರಿ ಖರ್ಚು ಹಾಕಿ ಮದುವೆ ಮಾಡಿದ್ದಾರೆ ,ಆದರೆ ಮದುವೆಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಅವರಿಬ್ಬರ ಮದುವೆ ಮಾತುಕತೆ ಮತ್ತು ವ್ಯವಹಾರಕ್ಕೆ ನಾನು ಸೇರಿರುವುದಿಲ್ಲ. ನಾನು ಮತ್ತು 1ನೇ ಪ್ರತಿವಾದಿಯೂ ವಿಶ್ವಾಸದಿಂದ ಇದ್ದೇವೆ ಎಂದರೆ ಸಾಕ್ಷಿಯೂ ಇಬ್ಬರೂ ಮಾತನಾಡುತ್ತೇವೆ ಎನ್ನುತ್ತಾರೆ. ನಾನು ಮತ್ತು 1ನೇ ಪ್ರತಿವಾದಿ ಇಬ್ಬರೂ ಚಿಕ್ಕಂದಿನಿಂದಲೂ ಬಾಲ್ಯ ಸ್ನೇಹಿತರಾಗಿದ್ದು ಆ ಕಾರಣದಿಂದ ಅವರ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ನಂಜಾಚಾರಿಯವರ ಕುಟುಂಬದ ಬಗ್ಗೆ, ಕುಟುಂಬದ ವ್ಯವಹಾರಗಳ ಬಗ್ಗೆ ಮತ್ತು ದಾವಾ ಸ್ವತ್ತುಗಳ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಒ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**